

## ಸರಪಳಿ ಮರ !

ಕೇರಳದ ಸುಪ್ರಸಿದ್ಧ ಪ್ರವಾಸೀ ತಾಣವಾದ ವೈನಾಡಿನ ಲಕ್ಕಿಡಿ ವ್ಯೂಪಾಯಿಂಟ್‌ನ ಬಳಿ ಚೈನ್ ಟ್ರೀ ಎಂಬ ಈ ಆಲದ ಮರವಿದೆ! ಈ ಮರಕ್ಕೆ ಒಂದು ಸರಪಳಿ ಅಥವಾ ಚೈನನ್ನು ಬಿಗಿದು ಕಟ್ಟಿರುವುದರಿಂದ ಈ ಹೆಸರು ಬಂದಿದ್ದು, ಇದರ ಹಿಂದೆ ಒಂದು ರೋಚಕವಾದ ಕಥೆಯಿದೆ! ಅದರಂತೆ, ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ, ಕರಿಂತಂಡನ್ ಎಂಬ ಆದಿವಾಸಿ ಯುವಕ, ಬ್ರಿಟಿಷ್ ಎಂಜಿನಿಯರ್ ಒಬ್ಬನಿಗೆ ತಳದಲ್ಲಿರುವ ಆದಿವಾರಂ ಎಂಬ ಸ್ಥಳದಿಂದ ವೈನಾಡಿಗೆ ಹೋಗಲು ಹತ್ತಿರದ ದಾರಿಯನ್ನು ತೋರಿಸಿಕೊಟ್ಟನಂತೆ. ಆದರೆ ಕೃತಘ್ನನಾದ ಆ ಬ್ರಿಟಿಷ್ ಎಂಜಿನಿಯರ್, ದಾರಿಯನ್ನು ತಿಳಿದುಕೊಂಡ ಬಳಿಕ, ಅದರ ಹೆಗ್ಗಳಿಕೆಯನ್ನು ತಾನೇ ಪಡೆಯಬೇಕೆಂದು ಆ ಆದಿವಾಸಿಯನ್ನು ಕೊಂದುಬಿಟ್ಟನಂತೆ! ಅನಂತರ ಆ ಆದಿವಾಸಿ ಪ್ರೇತಾತ್ಮವಾಗಿ ಅನೇಕ ಪ್ರವಾಸಿಗರನ್ನು, ಅದರಲ್ಲೂ ವಿದೇಶೀಯರನ್ನು ಕೊಲ್ಲುತ್ತಿದ್ದನಂತೆ! ಆಗ ಒಬ್ಬ ಹಿಂದೂ ಪೂಜಾರಿ, ಇಲ್ಲಿ ಕೆಲವು ಪೂಜೆಗಳನ್ನು ಮಾಡಿ, ಆ ಪ್ರೇತಾತ್ಮವನ್ನು ಈ ಮರಕ್ಕೆ ಸರಪಳಿಯಿಂದ ಕಟ್ಟಿಹಾಕಿಬಿಟ್ಟನಂತೆ! ಇದೇ ಚೈನ್ ಟ್ರೀ ಅಥವಾ ಸರಪಳಿ ಮರ! ಇಲ್ಲಿನ ಜನರು ಈಗಲೂ ಈ ಮರ ಬೆಳೆದಂತೆ, ಸರಪಳಿಯೂ ಬೆಳೆಯುತ್ತದೆ ಎಂದು ನಂಬುತ್ತಾರೆ!

ಚಿತ್ರ- ಬರಹ :
**ಡಾ.ಬಿ.ಆರ್.ಸುಹಾಸ್**

## ಯಡೂರು ಅಬ್ಬಿ!

ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಯಡೂರು ಪಕ್ಕದಲ್ಲಿರುವ ಈ ಅಬ್ಬಿ ಜಲಪಾತವನ್ನು ನೋಡುತ್ತಿರುವಂತೆಯೇ ಆಹಾ, ವ್ಹಾವ್... ಎಂಬ ಉದ್ಗಾರಗಳು ಥಟ್ಟನೆ ಹೊರ ಹೊಮ್ಮುತ್ತವೆ! ಉದ್ದಕ್ಕೆ ಹಾಸಿದ ಕಲ್ಲುಬಂಡೆಯಿಂದ ಧುಮುಕುತ್ತಾ ಹಾಲ್ನೊರೆ ಉಕ್ಕಿಸುವ ಈ ನೀರಧಾರೆ ಅನಿರ್ವಚನೀಯ ಆನಂದ ನೀಡುತ್ತದೆ. ಜಲಪಾತ ಆಳವಾಗಿಲ್ಲದಿರುವುದರಿಂದ ಅಪಾಯವೂ ಇಲ್ಲ. ಹಾಗಾಗಿ ನೀರಾಟಕ್ಕೆ ತುಂಬಾ ಸುರಕ್ಷಿತ ತಾಣ. ರಮಣೀಯ ನಿಸರ್ಗದೊಂದಿಗೆ ಪಿಸುಗುಟ್ಟುತ್ತಾ ಕಲ್ಲು ಹಾಸಿನ ಮೇಲೆ ಮೈಚೆಲ್ಲಿ ಆರಾಮಾಗಿ ಮಲಗಿಬಿಡಬಹುದು. ಹೊರ ಪ್ರಪಂಚಕ್ಕೆ ಇನ್ನೂ ತೆರೆದುಕೊಳ್ಳದ ಈ ಜಲಪಾತದ ಮಡಿಲೂ ಕೂಡಾ ಮೋಜಿನ ತಾಣವಾಗುತ್ತಿರುವುದಕ್ಕೆ ಸಾಕ್ಷಿಯಾಗಿ ಅಲ್ಲಲ್ಲಿ ಪ್ಲಾಸ್ಟಿಕ್ ತ್ಯಾಜ್ಯ, ಮದ್ಯದ ಬಾಟಲಿ ಬಿದ್ದಿವೆ. ಸಂಬಂಧಪಟ್ಟವರು ಕ್ರಮ ಕೈಗೊಂಡರೆ ಇದೊಂದು ಒಳ್ಳೆಯ ಪ್ರವಾಸಿ ತಾಣವಾಗಬಹುದು.

ಚಿತ್ರ ಬರಹ:
**ಡಾ. ಮುರಳೀಧರ ಕಿರಣಕೆರೆ, ತೀರ್ಥಹಳ್ಳಿ**





## ಯತಿಗಳ ಜಲಪಾತ್ರೆ ಕಮಂಡಲ

ಯತಿಗಳು, ಮುನಿಗಳು ನೀರನ್ನು ತಮ್ಮೊಂದಿಗೆ ಕೊಂಡೊಯ್ಯಲು ಬಳಸುತ್ತಿದ್ದ ಜಲಪಾತ್ರೆಯೇ ಕಮಂಡಲ. ದೇವದಾರು ಮರದಿಂದ ಮಾಡಿರುವ ಈ ಕಮಂಡಲಕ್ಕೆ ಹಿಡಿ ಮತ್ತು ಮುಚ್ಚಳ ಹಾಕುವ ಬಿರುಡೆ ಎಲ್ಲವೂ  ನಾಜೂಕಾಗಿವೆ. ಕಮಂಡಲದ ಪೀಠವು ವೃತ್ತಾಕಾರವಾಗಿದೆ. ಈಗ ಕಮಂಡಲವು ಪೌರಾಣಿಕ ನಾಟಕ ಅಥವಾ ಸಿನಿಮಾಗಳ ಋಷಿಮುನಿಗಳ ಕೈಯಲ್ಲಿ ಮಾತ್ರ ಕಾಣಬಹುದಾದ ಅಪರೂಪದ ವಸ್ತುವಾಗಿದೆ.

**- ಮ.ಗು.ಬಸವಣ್ಣ, ನಂಜನಗೂಡು**